# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1460 |
| ಮಾನ್ಯ ಸದಸ್ಯರ ಹೆಸರು | : | ಡಾ|| ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 20/03/2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕನ್ನಡ ಚಲನಚಿತ್ರಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ (ಸಬ್ಸಿಡಿ) ನೀಡಲಾಗುತ್ತಿದೆಯೇ; | ಹೌದು. |
| ಆ) | ಪ್ರತಿ ವರ್ಷಕ್ಕೆ ಎಷ್ಟು ಚಿತ್ರಕ್ಕೆ ಸಬ್ಸಿಡಿ ನೀಡಲಾಗುತ್ತಿದೆ: ಯಾವ ಯಾವ ರೀತಿಯ ಚಿತ್ರಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ; ಮೊತ್ತವೆಷ್ಟು; | ಸರ್ಕಾರದ ಆದೇಶ ಸಂಖ್ಯೆ:ಕಸಿಐ-ಪಿಐಎಫ್/16/2022, ದಿನಾಂಕ:11/04/2022ರನ್ವಯ 2022ನೇ ಕ್ಯಾಲೆಂಡರ್ ವರ್ಷದಿಂದ ಜಾರಿಗೆ ಬರುವಂತೆ **200** ಚಲನಚಿತ್ರಗಳಿಗೆ ಸಹಾಯಧನ ವಿತರಿಸಲಾಗುತ್ತಿದೆ. ಅದಕ್ಕೂ ಹಿಂದಿನ ಸಾಲಿನವರೆಗೆ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 99 ಪಿಐಎಫ್ 2016, ದಿನಾಂಕ:02/03/2017ರನ್ವಯ **125** ಚಲನಚಿತ್ರಗಳಿಗೆ ಸಹಾಯಧನ ನೀಡಲಾಗುತ್ತಿದೆ.<br><br>ಚಲನಚಿತ್ರ ನೀತಿಯನ್ವಯ ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ನಿರ್ಮಾಣವಾಗುವ ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷೆಗಳ ಗುಣಾತ್ಮಕ ಚಲನಚಿತ್ರಗಳಿಗೆ ಸಹಾಯಧನ ನೀಡಲಾಗುತ್ತದೆ. ಆಯಾ ವರ್ಷದ ಜನವರಿ 01 ರಿಂದ ಡಿಸೆಂಬರ್ 31ರವರೆಗಿನ ಕ್ಯಾಲೆಂಡರ್ ವರ್ಷದಲ್ಲಿ ಸೆನ್ಸಾರ್ ಆಗಿರುವ ಕನ್ನಡ ಚಲನಚಿತ್ರಗಳು ಆಯಾ ವರ್ಷದ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತವೆ.<br><br>ಸಹಾಯಧನ ವರ್ಗೀಕರಣದಡಿ ಈ ಕೆಳಕಂಡಂತೆ ಚಲನಚಿತ್ರಗಳಿಗೆ ವಿಶೇಷ ಸಹಾಯಧನ ಹಾಗೂ ಸಾಮಾನ್ಯ ವರ್ಗದ ವಿಭಾಗದಲ್ಲಿ ಸಹಾಯಧನ ವಿತರಿಸಲಾಗುತ್ತದೆ:<br><br>ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿಯು ಚಲನಚಿತ್ರಗಳನ್ನು ವೀಕ್ಷಿಸಿ ಈ ಕೆಳಕಂಡ 04 ವಿಭಾಗಗಳಲ್ಲಿ ಸಹಾಯಧನ ವಿತರಿಸಲು ಆಯ್ಕೆ ಮಾಡಲಾಗುತ್ತದೆ.<br><br>1 – ಚಾರಿತ್ರಿಕ ಹಾಗೂ ರಾಜ್ಯದ ಪ್ರವಾಸಿ ತಾಣಗಳನ್ನು ಕೇಂದ್ರಿಕರಿಸಿ ನಿರ್ಮಿಸುವ ಗರಿಷ್ಠ 4 ಚಿತ್ರಗಳಿಗೆ ತಲಾ ರೂ.25.00 ಲಕ್ಷ.<br>2 – ಅತ್ಯುತ್ತಮ ರಾಜ್ಯ ಪ್ರಶಸ್ತಿ ಪಡೆದ ಮಕ್ಕಳ ಚಲನಚಿತ್ರ ಒಳಗೊಂಡಂತೆ ಗರಿಷ್ಠ 04 ಮಕ್ಕಳ ಚಲನಚಿತ್ರಗಳಿಗೆ ತಲಾ ರೂ.25.00 ಲಕ್ಷ.<br>3 – ಉತ್ತಮ ಸಾಹಿತ್ಯ ಕೃತಿ ಆಧಾರಿತ 05 ಚಲನಚಿತ್ರಗಳಿಗೆ ತಲಾ ರೂ.15.00ಲಕ್ಷ.<br>4 – ಸಾಮಾನ್ಯ ವಿಭಾಗದಲ್ಲಿ ಆಯ್ಕೆಗೊಂಡ ಚಲನಚಿತ್ರಗಳಿಗೆ ತಲಾ ರೂ.10.00ಲಕ್ಷ.<br><br>ಇದಲ್ಲದೆ, ರಾಷ್ಟ್ರಮಟ್ಟದಲ್ಲಿ ಸ್ವರ್ಣ ಮತ್ತು ರಜತ ಕಮಲ ಪ್ರಶಸ್ತಿ ಪಡೆದ ಚಲನಚಿತ್ರಗಳು, ಭಾರತೀಯ ಪನೋರಮ |

| | | |
|---|---|---|
| | | ವಿಭಾಗಕ್ಕೆ ಆಯ್ಕೆಯಾದ ಚಲನಚಿತ್ರಗಳು, FIAPFನಿಂದ ಮನ್ನಣೆ ಪಡೆದ ಯಾವುದೇ ಅಧಿಕೃತ ಅಂತರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ, FIAPF (International Federation of Film Producers Associations) ಮಾನ್ಯತೆ ನೀಡಿರುವ ವಿಭಾಗದಲ್ಲಿ ಪ್ರಶಸ್ತಿ ಪಡೆದ ಚಲನಚಿತ್ರಗಳು ಮತ್ತು FIAPF ನಿಂದ ಮನ್ನಣೆ ಪಡೆದ ಯಾವುದೇ ಅಧಿಕೃತ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ FIAPF ಮಾನ್ಯತೆ ನೀಡಿರುವ ವಿಭಾಗದ ಸ್ಪರ್ಧಾ ವಿಭಾಗದಲ್ಲಿ ಆಯ್ಕೆಯಾಗಿ ಪ್ರದರ್ಶನಗೊಂಡ ಚಲನಚಿತ್ರಗಳು; ರಾಜ್ಯ ಸರ್ಕಾರದ ಪ್ರಥಮ, ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ, ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ ಹಾಗೂ ವಿಶೇಷ ಸಾಮಾಜಿಕ ಕಾಳಜಿಯ ಚಲನಚಿತ್ರಗಳು, ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಲನಚಿತ್ರಗಳು ತಲಾ ರೂ.15.00 ಲಕ್ಷಗಳ ವಿಶೇಷ ಸಹಾಯಧನಕ್ಕೆ ಆಯ್ಕೆ ಸಮಿತಿಯ ವೀಕ್ಷಣೆಗೆ ಒಳಪಡದೆ ನೇರವಾಗಿ ಸಹಾಯ ಧನ ಪಡೆಯಲು ಅರ್ಹತೆ ಹೊಂದಿರುತ್ತವೆ. |
| ಇ) | ಇಲ್ಲಿಯವರೆಗೆ ಎಷ್ಟು ಚಿತ್ರಗಳಿಗೆ ಸಬ್ಸಿಡಿ ನೀಡಲಾಗಿದೆ; ಇನ್ನು ಎಷ್ಟು ಚಿತ್ರಗಳಿಗೆ ಸಬ್ಸಿಡಿ ಮೊತ್ತವನ್ನು ನೀಡಬೇಕಾಗಿದೆ; | ಕನ್ನಡ ಚಲನಚಿತ್ರ ನೀತಿ -2011 ಜಾರಿಗೆ ಬಂದಾಗಿನಿಂದ 2018ರವರೆಗೆ ಒಟ್ಟು 804 ಚಲನಚಿತ್ರಗಳಿಗೆ ಸಹಾಯಧನ ವಿತರಿಸಲಾಗಿರುತ್ತದೆ. ಸಹಾಯಧನ ಪಡೆಯಲು ಕಡ್ಡಾಯವಾಗಿ ಸಲ್ಲಿಸಬೇಕಾದ ಆದಾಯ ತೆರಿಗೆ ಇಲಾಖೆಯ No Due Certificate ಹಾಗೂ ಇತರೆ ದಾಖಲಾತಿಗಳನ್ನು ಸಲ್ಲಿಸದ ಕಾರಣ ಒಟ್ಟು 21 ಚಲನಚಿತ್ರಗಳಿಗೆ ಸಹಾಯಧನ ವಿತರಣೆ ಬಾಕಿಯಿದೆ.<br>ಇತ್ತೀಚೆಗೆ ದಿನಾಂಕ:27/2/2025 ರಂದು 2019ನೇ ಕ್ಯಾಲೆಂಡರ್ ವರ್ಷಕ್ಕೆ ಸಂಬಂಧಿಸಿದಂತೆ ಆಯ್ಕೆ ಸಲಹಾ ಸಮಿತಿಯ ವರದಿಯನ್ನು ಅಂಗೀಕರಿಸಿ, ಆದೇಶ ಹೊರಡಿಸಲಾಗಿದ್ದು, ವೀಕ್ಷಣೆಗೆ ಒಳಪಡದೆ ನೇರವಾಗಿ ಆಯ್ಕೆಗೊಂಡು ಸಹಾಯಧನ ಪಡೆದುಕೊಂಡಿದ್ದ ಚಲನಚಿತ್ರಗಳನ್ನು ಹೊರತುಪಡಿಸಿ, ಉಳಿದ 100 ಚಲನಚಿತ್ರಗಳಿಗೆ ಸಹಾಯಧನ ವಿತರಿಸಲು ಕ್ರಮ ವಹಿಸಲಾಗುತ್ತಿದೆ. 2020, 2021 ಮತ್ತು 2022ನೇ ಕ್ಯಾಲೆಂಡರ್ ವರ್ಷಗಳಿಗೆ ಆಯ್ಕೆ ಸಲಹಾ ಸಮಿತಿಯು ಚಲನಚಿತ್ರಗಳನ್ನು ವೀಕ್ಷಿಸಿ ಆಯ್ಕೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br>2023 ಮತ್ತು 2024ನೇ ಸಾಲಿಗೆ ಆಯ್ಕೆ ಸಲಹಾ ಸಮಿತಿಯನ್ನು ರಚಿಸಿ, ಸಹಾಯಧನಕ್ಕೆ ಅರ್ಜಿ ಆಹ್ವಾನಿಸುವುದು ಬಾಕಿಯಿರುತ್ತದೆ. |
| ಈ) | ಸಬ್ಸಿಡಿ ಮೊತ್ತವನ್ನು ಹೆಚ್ಚಿಸುವ ಚಿಂತನೆ ಸರ್ಕಾರದ ಮುಂದಿದೆಯೇ? | ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಸಂ: ಕೆಸಿಐ-ಪಿಐಪಿ/104/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ